## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 17 ಚಾಸಾಃ- 26**

| | | |
|---|---|---|
| ಸಾಕ್ಷಿಯ ಹೆಸರು | : | ಎನ್.ಸತೀಶ್ |
| ತಂದೆಯ ಹೆಸರು | : | ಎನ್.ಶಿವರುದ್ರಪ್ಪ |
| ವಯಸ್ಸು | : | 44 ವರ್ಷ |
| ವೃತ್ತಿ | : | ಪೋಲೀಸ್ ಇನ್‌ಸ್‌ಪೆಕ್ಟರ್, ಜೆಸ್ಕಾಂ ಪೋಲೀಸ್ ಠಾಣೆ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ: 03-07-2023 ರಿಂದ 06-11-2025 ರವರೆಗೆ ಬಳ್ಳಾರಿ ಗ್ರಾಮಾಂತರ ಪೊಲೀಸ್ ಠಾಣೆ, ಬಳ್ಳಾರಿಯಲ್ಲಿ ಪೊಲೀಸ್ ಇನ್‌ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಸಮಯದಲ್ಲಿ ದಿನಾಂಕ: 19-12-2023 ರಿಂದ 19-01-2024 ರವರೆಗೆ ಪಿ.ಡಿ.ಹಳ್ಳಿ ವೃತ್ತದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಪ್ರಭಾರ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 10-01-2024 ರಂದು ಮೊ.ಸಂಖ್ಯೆ: 90/2023ರ ಪ್ರಕರಣದ ಕಡತವನ್ನು ಚಾ.ಸ.24 ರವರಿಂದ ಪಡೆದು, ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ, ಸದರಿ ದಿನ ವಿಮ್ಸ್ ಶವಗಾರಕ್ಕೆ ಭೇಟಿ ನೀಡಿ ಕೊಲೆಯಾಗಿ ಮೃತಳಾದ ಶ್ರೀಮತಿ. ಲಕ್ಷ್ಮಿ ಗಂಡ ಮಂಜು, ರವರ ಶವ ಪಂಚನಾಮೆ ನಡೆಸಲು ಪಂಚರಾದ ಚಾ.ಸ. 05 ಮತ್ತು 06 ರವರನ್ನು ಬರಮಾಡಿಕೊಂಡು ನೋಟಿಸ್ ನೀಡಿ ಶವ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 01.30 ರ ವರೆಗೆ ಮಾಡಿರುತ್ತೇನೆ. ಮತ್ತು ಚಾ.ಸ.07, 08, 09, 10, 11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿ ಚಾ.ಸ. 05 ಮತ್ತು 06 ಪಂಚರಿಗೆ ನೀಡಿದ ನೋಟಿಸ್‌ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-12 (ಸಿ) ಎಂದು ಗುರುತಿಸಲಾಯಿತು. ಚಾ.ಸ. 09 ಮತ್ತು 12 ರವರು ನನ್ನ ಮುಂದೆ ನಿಪಿ.14 ಮತ್ತು 16 ರಂತೆ ಹೇಳಿಕೆ ನೀಡಿರುತ್ತಾರೆ. ಸಾಕ್ಷಿ ಶವ ಪಂಚನಾಮೆ ನೋಡಿ

ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ. 11 (ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ. 13 ಫೋಟೋ ನೋಡಿ ಗುರುತಿಸಿರುತ್ತಾರೆ.

ಚಾ.ಸ.17 ಹೆ.ಚ್.576 ಕುಮಾರಸ್ವಾಮಿ ರವರ ಮುಖಾಂತರ ವೈಧ್ಯಾಧಿಕಾರಿಗಳಿಗೆ ಶವ ಪರಿಕ್ಷೆ ನಡೆಸಲು ಮನವಿ ಪತ್ರವನ್ನು ನೀಡಿರುತ್ತೇನೆ. ಶವ ಪರೀಕ್ಷೆ ನಂತರ ಶವವನ್ನು ಮುಂದಿನ ಕ್ರಮಕ್ಕಾಗಿ ಚಾ.ಸ.08 ರವರಿಗೆ ನೀಡಿ ಸ್ವೀಕೃತಿ ಪಡೆದಿರುತ್ತೇನೆ, ಸಾಕ್ಷಿ ಸ್ವೀಕೃತಿ ನೋಡಿ ಗುರುತಿಸಿದ್ದು ಅದನ್ನು ನಿಪಿ_32 ಎಂದು **ಮತ್ತು** ನಿಪಿ_32(ಎ) ಎಂದು ಗುರುತಿಸಲಾಯಿತು.

ದಿನಾಂಕ: 12-01-2024 ರಂದು ಚಾ.ಸ.17 ರವರು ವೈಧ್ಯಾಧಿಕಾರಿಗಳು ನೀಡಿದ ಮೃತಳ ಪಿ.ಎಮ್. ವರದಿ ಹಾಜರ್ ಪಡಿಸಿ ಮತ್ತು ವೈಧ್ಯರು ಶೇಖರಿಸಿಕೊಟ್ಟ ಭಾಂಗಿಗಳನ್ನು ಹಾಜರ್ ಪಡಿಸಿದ್ದು, ಚಾ.ಸ.03, 04 **ಪಂಚರನ್ನು** ಬರಮಾಡಿಕೊಂಡು ನಿಪಿ.08 ರಂತೆ ನೋಟಿಸ್ ನೀಡಿ ಮದ್ಯಾಹ್ನ 03.00 ಗಂಟೆಯಿಂದ 03.45 ರವರೆಗೆ ನಿಪಿ.06 ರಂತೆ ಪಂಚನಾಮೆ ಜರುಗಿಸಿ ನಿಪಿ.09 ರಂತೆ ಫೋಟೋ ತೆಗೆಯಿಸಿ ನಂತರ ಜಪ್ತಾದ ವಸ್ತುಗಳನ್ನು ಪಿ.ಡಿ.ಹಳ್ಳಿ. ಪೋಲೀಸ್ ಠಾಣೆ ಮಾಲು ಪಟ್ಟಿ ಸಂಖ್ಯೆ: 03/2024 ರಲ್ಲಿ ನಮೂದಿಸಿರುತ್ತೇನೆ, ನಂತರ ಸದರಿ ಮೆಲ್ಕಂಡ ಚಾ.ಸ.03, 04 ರವರ ಸಮಕ್ಷಮ ಚಾ.ಸ.17 ರವರು ಮೃತಳ ಸ್ಟೋಮಕ್ ವಾಶ್ ಹಾಜರ್ ಪಡಿಸಿದ್ದು ಸಂಜೆ 04.00 ಗಂಟೆ ಯಿಂದ 04.30 ರವರೆಗೆ ನಿಪಿ.07 ರಂತೆ ಜಪ್ತು ಪಂಚನಾಮೆ ಮಾಡಿ ಜಪ್ತು ಪಡೆಸಿಕೊಂಡು, ಮಾಲು ಪಟ್ಟಿ ಸಂಖ್ಯೆ: 04/2024 ರಲ್ಲಿ ನಮೂದಿಸಿರುತ್ತೇನೆ. ಪಂಚನಾಮೆ ಸಮಯದಲ್ಲಿ ನಿಪಿ.10 ರಂತೆ ಭಾವಚಿತ್ರ ತೆಗೆಸಿರುತ್ತೇನೆ, ನಂತರ ಮಾಲು ಪಟ್ಟಿ ಸಂಖ್ಯೆ: 03 ಮತ್ತು 04 ಗಳನ್ನು ಮಾನ್ಯ ನ್ಯಾಯಾಲಯಕ್ಕೆ ನೀವೆದಿಸಿಕೊಂಡಿರುತ್ತೇನೆ. ಹಾಗೂ ಚಾ.ಸ.15 ರವರಿಂದ ಭಾರತೀಯ ಸಾಕ್ಷಾ ಅಧಿನಿಯಮ 1872 ಕಲಂ 65 (ಬಿ) ರಂತೆ ಪ್ರಮಾಣ ಪತ್ರ ಪಡೆದಿರುತ್ತೇನೆ, ಚಾ.ಸ.17 ರವರ ಮರು ಹೇಳಿಕೆ ಮತ್ತು ಚಾ.ಸ.18 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಕಲಂ 65 (ಬಿ) ಭಾರತೀಯ ಸಾಕ್ಷಾ ಅಧಿ ನಿಯಮ ಅಡಿಯಲ್ಲಿನ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ.-33 ಎಂದು ಸಾಕ್ಷಿ ಸಹಿಯನ್ನು ನಿಪಿ_33(ಎ) ಎಂದು ಗುರುತಿಸಲಾಯಿತು. ನಿಪಿ-**6** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-**6(**ಡಿ**)** ಎಂದು ಗುರುತಿಸಲಾಯಿತು**.** ನಿಪಿ-**7** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-**7(**ಡಿ**)** ಎಂದು ಗುರುತಿಸಲಾಯಿತು**.** ನಿಪಿ-**8** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-**8(**ಸಿ**)** ಎಂದು ಗುರುತಿಸಲಾಯಿತು**.**

ದಿನಾಂಕ: 19-01-2024 ರಂದು ಪ್ರಕರಣದ ಕಡತವನ್ನು ಚಾ.ಸ.25 ಶ್ರೀ. ಉಮೇಶ ಪೋಲೀಸ್ ಇನ್ಸ್‌ಪೆಕ್ಟರ್ ರವರಿಗೆ ನೀಡಿರುತ್ತೇನೆ.

ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ. ಸಮಯ ಕೊಡಲು ನಿರಾಕರಿಸಲಾಯಿತು. ಆರೋಪಿ ಪರ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 18 ಚಾಸಾಃ- 27**

| | | |
|---|---|---|
| ಸಾಕ್ಷಿಯ ಹೆಸರು | : | ರುದ್ರಪ್ಪ.ಎಲ್ |
| ತಂದೆಯ ಹೆಸರು | : | ಹನುಮಪ್ಪ.ಎಲ್ |
| ವಯಸ್ಸು | : | 49 ವರ್ಷ |
| ವೃತ್ತಿ | : | ಪೊಲೀಸ್ ಇನ್ಸ್ ಪೆಕ್ಟರ್, ಪಿ ಡಿ ಹಳ್ಳಿ ವೃತ್ತ, |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ: 30/01/2024 ರಿಂದ ಇಲ್ಲಿಯವರಿಗೂ ಪಿ ಡಿ ಹಳ್ಳಿ ವೃತ್ತದಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:-31-01-2024 ರಂದು ಚಾಸಾ 25 ರವರ ಮುಖಾಂತರ ಈ ಪ್ರಕರಣದ ಮೂಲ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ.

ದಿನಾಂಕ:- 05-02-2024 ರಂದು ಪ್ರಕರಣದಲ್ಲಿ FLMS ತಂತಾಂಶದ ಆನ್ ಲೈನ್ ನಲ್ಲಿ ಬಂದ ಆರ್.ಎಫ್.ಎಸ್.ಎಲ್. ವರದಿ ಪಡೆದುಕೊಂಡು ಪರಿಶೀಲಿಸಿ ನೋಡಲಾಗಿ ಚಾಸಾ-22 ಡಾ|| ವಿಜಯ್ ಶೇಖರ್, ಸೀನಿಯರ್ ಸೈಂಟಿಫಿಕ್ ಆಪೀಸರ್, ಆರ್.ಆಫ್.ಎಸ್.ಎಲ್..ಬಳ್ಳಾರಿ ರವರ ಕಛೇರಿಯ FLMS Reg NO:RFSLBLY/FLMS/66/2024 & FLMS Report No:RFSLBLY/FLMS/TS/43/2024, Dated:29-01-2024 ನೇದರಲ್ಲಿ ಆಭಿಪ್ರಾಯ ವರದಿ ನೀಡಿದ್ದು ಇರುತ್ತದೆ. ಮೇಲ್ಕಂಡಂತೆ ತಜ್ಞರ ಅಭಿಪ್ರಾಯ ವರದಿಯಲ್ಲಿ ನಮೂದಿದಂತೆ ಮೃತಳ ಸ್ಟಮಕ್ ವಾಷ್ ಭಾಗಿಯಲ್ಲಿ ವಿಷ ಪತ್ತೇಯಾಗಿದ್ದು, ಉಳಿದಂತೆ ವಿಶ್ರಾ ಭಾಂಗಿಗಳನ್ನು(4) ಯಾವುದೇ ವಿಷ ಇರುವಿಕೆ ಬಗ್ಗೆ ಪತ್ತೆಯಾಗಿರುವುದಿಲ್ಲ.

ನಂತರ ಮೇಲ್ಕಂಡಂತೆ ಸ್ವೀಕರಿಸಿದ ಆರ್.ಆಫ್.ಎಸ್.ಎಲ್.ವರದಿಯನ್ನು ಪರಿಶೀಲಿಸಿ ಮೃತಳ ಮರಣಕ್ಕೆ ಸ್ಪಷ್ಟ ಹಾಗೂ ಅಂತಿಮ ಅಭಿಪ್ರಾಯ ವರದಿ ನೀಡಿಲು ಕೋರಿ ಪ್ರಕರಣದಲ್ಲಿನ ಮೃತ ಲಕ್ಷ್ಮೀ ರವರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ಜರುಗಿಸಿ ಮೃತಳ ಮರಣಕ್ಕೆ ಕಾರಣಗಳನ್ನು ಸ್ವೀಕರಿಸಿದ ಆರ್.ಆಫ್.ಎಸ್.ಎಲ್ ವರದಿಗಾಗಿ ಬಾಕಿ ಇರಿಸಿ ಮೂಲ ಪಿ.ಎಂ. ವರದಿ ನೀಡಿದ ಚಾಸಾ-23 ಡಾ|| ಯೋಗೇಶ ಸಹಾಯಕ ಪ್ರಾಧ್ಯಾಪಕರು,ವಿಮ್ಸ್ ಆಸ್ಪತ್ರೆ,ಬಳ್ಳಾರಿ ರವರಿಗೆ ಮನವಿ ಪತ್ರ ತಯಾರಿಸಿ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ RFSL ವರದಿ ನೋಡಿ ಗುರ್ತಿಸಿದ್ದು ಅದನ್ನು ನಿ.ಪಿ.24 ಎಂದು ಈಗಾಗಲೇ ಗುರ್ತಿಸಲಾಗಿದ್ದು. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ಚಾಸಾ.23 ರವರಿಗೆ ನೀಡಿದ ಮನವಿ ಪತ್ರ ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿ.ಪಿ. 26 ಎಂದು ಗುರ್ತಿಸಲಾಗಿದ್ದು, ಅದರಲ್ಲಿ ಸಾಕ್ಷಿಯ ಸಹಿಯನ್ನುನಿ.ಪಿ 26(ಎ) ಎಂದು ಗುರ್ತಿಸಲಾಯಿತು.

ದಿನಾಂಕ:07-02-2024 ರಂದು ಪ್ರಕರಣದಲ್ಲಿನ ಮೃತ ಲಕ್ಷ್ಮೀ ರವರ ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ಒಳಪಡಿಸಿ ಮೂಲ ಪಿ.ಎಂ. ವರದಿ ನೀಡಿದ ವೈದ್ಯಾಧಿಕಾರಿ ಚಾಸಾ-23 ಡಾ|| ಯೋಗೇಶ ಸಹಾಯಕ ಪ್ರಾಧ್ಯಾಪಕರು,ವಿಮ್ಸ್ ಆಸ್ಪತ್ರೆ,ಬಳ್ಳಾರಿ ರವರು ನೀಡಿದ ತಜ್ಞರ ಅಂತಿಮ ಅಭಿಪ್ರಾಯ ವರದಿ ನೀಡಿದನ್ನು ನಿ.ಪಿ 27 ರಂತೆ ಪಡೆದುಕೊಂಡು ಪರಿಶೀಲಿಸಿ ನೋಡಲಾಗಿ, ವೈದ್ಯರು On Perusal of above mentioned reports, treatment records, of the deceased from VIMS Hospital Ballari, I am of the opinion death is due cardiac failure as a result of Glyphosate poisioning consequent upon consumption of a substance containing Glyphoste compound(Hebricide) ಅಂತಾಗಿ ತಮ್ಮ ಅಂತಿಮ ಅಭಿಪ್ರಾಯ ತಿಳಿಸಿದ್ದು ಇರುತ್ತದೆ. ನಿಪಿ 27 ರಲ್ಲಿನ ಸಾಕ್ಷಿ ಸಹಿಯನ್ನು ನಿಪಿ 27(ಬಿ) ಎಂದು ಗುರ್ತಿಸಲಾಯಿತು.

ನಂತರ ದಿನಾಂಕ:09/02/2024 ರಂದು ಪ್ರಕರಣದಲ್ಲಿ ಈಗಾಗಲೇ ನಕಾಶೆ ತಯಾರಿಸಿಕೊಡಲು ಕೋರಿ ಪಿ.ಡಬ್ಲ್ಯೂ.ಡಿ ಇಲಾಖೆಗೆ ಈಗಾಗಲೇ ಮನವಿ ಪತ್ರ ಸಲ್ಲಿಸಿಕೊಂಡಿದ್ದರ ಮೇರೆಗೆ ಚಾಸಾ 19 ಕಲ್ಯಾಣಸ್ವಾಮಿ, ಎ.ಇ ಪಿ. ಡಬ್ಲ್ಯೂ.ಡಿ ಇಲಾಖೆ ರೂಪನಗುಡಿ ವಿಭಾಗ ಬಳ್ಳಾರಿ ರವರ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಲು ಈ ದಿನ ಸ್ಥಳಕ್ಕೆ ಬರುವುದಾಗಿ ತಿಳಿಸಿದ ಮೇರೆಗೆ ತಕ್ಷಣ ಪಿ.ಡಿ ಹಳ್ಳಿ ವೃತ್ತ ಕಛೇರಿಯ ಸಿಬ್ಬಂದಿ ಚಾಸಾ 18 ರವಿ, ಸಿ.ಹೆಚ್.ಸಿ 31 ರವರನ್ನು ನೇಮಿಸಿ ಘಟನಾ ಸ್ಥಳಕ್ಕೆ ಹೋಗಿ ಪ್ರಕರಣದಲ್ಲಿನ ಘಟನಾ ಸ್ಥಳವನ್ನು ಪಿ.ಡಬ್ಲ್ಯೂ.ಡಿ ಎ.ಇ, ಇಲಾಖೆ ಅಧಿಕಾರಿಗಳಿಗೆ ತೋರಿಸಲು ಸೂಚಿಸಿ

ನೇಮಿಸಿ ಕಳುಹಿಸಿದ್ದು, ಸದರಿ ಸಿಬ್ಬಂದಿಯು ಆ ದಿನ ಘಟನಾ ಸ್ಥಳಕ್ಕೆ ಹೋಗಿ ಸ್ಥಳಕ್ಕೆ ಬಂದ ಚಾಸಾ 19 ಕಲ್ಯಾಣಸ್ವಾಮಿ, ಎ.ಇ ಪಿ. ಡಬ್ಲ್ಯೂ.ಡಿ ಇಲಾಖೆ ರವರಿಗೆ ಪ್ರಕರಣದಲ್ಲಿನ ಘಟನಾ ಸ್ಥಳವನ್ನು ತೋರಿಸಿದ್ದು, ಅದರಂತೆ ಪಿಡಬ್ಲ್ಯೂಡಿ ಎ,ಇ ರವರು ಘಟನಾ ನಕಾಶೆಯನ್ನು ತಯಾರಿಸಿಕೊಂಡು ಹೋದ ಬಗ್ಗೆ ಸದರಿ ಚಾಸಾ 18 ರವರು ವಾಪಸ್ಸು ಬಂದು ಈ ಕಛೇರಿಯಲ್ಲಿ ವರದಿ ಮಾಡಿಕೊಂಡು ತಿಳಿಸಿದ ಮೇರೆಗೆ ಈ ಕುರಿತು ಸದರಿ ಸಿಬ್ಬಂದಿಯವರನ್ನು ವಿಚಾರಿಸಿ ಅವರ ಮರುಹೇಳಿಕೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದೆ.

ದಿನಾಂಕ: 14/02/2024 ರಂದು ಪ್ರಕರಣದಲ್ಲಿ ಮಾನ್ಯ ಎ.ಇ.ಇ, ಪಿಡಬ್ಲ್ಯೂಡಿ, ಇಲಾಖೆ ಬಳ್ಳಾರಿರವರ ಕಛೇರಿ ಪತ್ರ ಸಕಾನಿಅ/ಲೋಇ/ಉವಿಬ/ಪಿ.ಬಿ/ಕ್ರ.ನ/23-24/1616, ದಿನಾಂಕ:14/02/2024 ರ ಪತ್ರ ಹಾಗೂ ಘಟನಾ ಸ್ಥಳದ ಮೂಲ ನಕಾಶೆಯನ್ನು ಚಾಸಾ 19 ಕಲ್ಯಾಣಸ್ವಾಮಿ, ಎ.ಇ ಪಿ. ಡಬ್ಲ್ಯೂ.ಡಿ ಇಲಾಖೆ ಒದಗಿಸಿದ್ದನ್ನು ಪಡೆದುಕೊಂಡು ಪರಿಶೀಲಿಸಿ ಸದರಿ ದಾಖಲಾತಿಗಳನ್ನು ಕಡತಕ್ಕೆ ಅಳವಡಿಸಿಕೊಂಡಿದೆ. ಸಾಕ್ಷಿ ಸದರಿ ಪತ್ರ ಹಾಗೂ ನಕಾಶೆ ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ17 ಎಂದು ಒಪ್ಪಿಗೆ ಮೇರೆಗೆ ಗುರುತಿಸಲಾಗಿದ್ದು.

ದಿನಾಂಕ:26/02/2024 ರಂದು ಪ್ರಕರಣದಲ್ಲಿ ಮಾನ್ಯ ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿಗಳು ಬಳ್ಳಾರಿ ತಾಲ್ಲೂಕು ಬಳ್ಳಾರಿ ರವರ ಕಛೇರಿಯಿಂದ ಫಿರ್ಯಾದಿದಾರರು/ಮೃತ ಶ್ರೀಮತಿ ಲಕ್ಷ್ಮೀ ರವರ ಮರಣ ಪೂರ್ವ ಹೇಳಿಕೆಯ ದೃಢೀಕೃತ ಪ್ರತಿ ಒದಗಿಸಿದ್ದನ್ನು ಪಡೆದುಕೊಂಡು ಪರಿಶೀಲಿಸಿ ನೋಡಲಾಗಿ, ಸದರಿ ಮರಣ ಪೂರ್ವ ಹೇಳಿಕೆಯನ್ನು ಚಾಸಾ 20 ಗುರುರಾಜ್ ಎಂ ಚಲುವಾದಿ, ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿಗಳು ಬಳ್ಳಾರಿ ತಾಲ್ಲೂಕು ಬಳ್ಳಾರಿ ರವರು ದಾಖಲಿಸಿಕೊಂಡಿದ್ದು, ಸದರಿ ಮರಣ ಪೂರ್ವ ಹೇಳಿಕೆಯನ್ನು ಮೃತಳು “ಆರೋಪಿ ಎರ್ರೆಪ್ಪ ಈತನು ಬಲವಂತವಾಗಿ ವಿಷ ಕುಡಿಸಿರುತ್ತಾನೆಂದು” ನುಡಿದಿರುತ್ತಾಳೆ. ಸಾಕ್ಷಿ ನಿಪಿ 21 ಅನ್ನು ನೋಡಿ ಗುರ್ತಿಸಿರುತ್ತಾರೆ.

ಪ್ರಕರಣದಲ್ಲಿನ ಈವರೆಗಿನ ತನಿಖೆ ಹಾಗೂ ಸಾಕ್ಷ್ಯಾಧಾರಗಳಿಂದ ಆರೋಪಿ ಎರ್ರೆಪ್ಪ / ಯರ್ರೆಪ್ಪ ರವರ ವಿರುದ್ದ ಆರೋಪಗಳು ಸಾಬೀತಾಗಿದ್ದರಿಂದ ಸದರಿ ಆರೋಪಿ ಎರ್ರೆಪ್ಪ/ ಯರ್ರೆಪ್ಪ ರವರ ವಿರುದ್ದ ಕಲಂ:302 ಐಪಿಸಿ ರೀತ್ಯಾ ದೋಷರೋಪಣ ಪತ್ರ ಮಾನ್ಯ ನ್ಯಾಯಾಲಯಕ್ಕೆ ತಯಾರಿಸಿ ಸಲ್ಲಿಸಿಕೊಂಡಿರುತ್ತೇನೆ.

ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ. ಸಮಯ ಕೊಡಲು ನಿರಾಕರಿಸಲಾಯಿತು. ಆರೋಪಿ ಪರ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 16 ಚಾಸಾಃ- 24**

| | | |
|---|---|---|
| ಸಾಕ್ಷಿಯ ಹೆಸರು | : | ಬಿ.ಪರಮೇಶ್ವರ |
| ತಂದೆಯ ಹೆಸರು | : | ಶಿವರಾಮುಲು |
| ವಯಸ್ಸು | : | 53 ವರ್ಷ |
| ವೃತ್ತಿ | : | ಪಿ ಎಸ್ ಐ, |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ **23.03.2023** ರಿಂದ **14.01.2025** ರವರೆಗೆ ಪಿ.ಡಿಹಳ್ಳಿ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ: **30.12.2023** ನಾನು ಠಾಣಾ ಪ್ರಭಾರದಲ್ಲಿದ್ದಾಗ ಮೃತ ಲಕ್ಷ್ಮಿ ಎಂಬುವವರು ವಿಮ್ಸ್ ಆಸ್ಪತ್ರೆಯಲ್ಲಿ ವಿಷ ಸೇವನೆ ವಿಷಯದಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವ ವಿಷಯ ತಿಳಿದು ಬೆಳಿಗ್ಗೆ ಚಾಸಾ**17** ರವರು ವಿಮ್ಸ್ ಆಸ್ಪತ್ರೆಗೆ ತೆರಳಿ ಶ್ರೀಮತಿ ಲಕ್ಷ್ಮಿ ತಂದೆ ಎರೆಪ್ಪ ರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿರುವವರೆ ಎಂಬ ಕುರಿತಂತೆ ವೈದ್ಯರಲ್ಲಿ ಮನವಿ ಸಲ್ಲಿಸಲು ಹೇಳಿದ್ದು ಚಾಸಾ **17** ನಿಪಿ **18** ರಂತೆ ಲಕ್ಷ್ಮಿ ರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿರುವವ ಬಗ್ಗೆ ಮಾಹಿತಿ ತಿಳಿಸಿರುತ್ತಾರೆ. ಮಾಹಿತಿ ಪಡೆದು ದಿನಾಂಕ: **30.12.2023** ರ ಬೆಳಿಗ್ಗೆ **11-30** ರಿಂದ **12-30** ರ ಅವಧಿಯಲ್ಲಿ ಲಕ್ಷ್ಮಿ ಗಂಡ ಮಂಜು ವಾಸ: ಅಸುಂಡಿ ರವರು ಹೇಳಿದಂತೆ ದೂರನ್ನು ಹೆಚ್ ಸಿ**-576** ರವರಿಂದ ಬರೆಯಿಸಿ ಪಡೆದುಕೊಂಡ ನಂತರ ಲಕ್ಷ್ಮಿಗೆ ಅದನ್ನು ಓದಿ ಹೇಳಿ ಅವರ ಸಹಿ ಪಡೆದು ಠಾಣೆಗೆ **01-15** ಪಿಎಂ ಗೆ ಬಂದು ಠಾಣಾ ಗುನ್ನೆ ನಂ**-90/2023** ರ ಅಡಿಯಲ್ಲಿ ದೂರು ದಾಖಲಿಸಿಕೊಂಡು ಪ್ರ ವ, ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರ್ತಿಸಿದ್ದು ನಿಪಿ**- 28** ಎಂದು ಸಾಕ್ಷಿ ಸಹಿಯನ್ನು ನಿಪಿ**-28(**ಎ**)** ಎಂದು ಗುರುತಿಸಲಾಯಿತು. ದೂರುದಾರಳ ಸಹಿಯನ್ನು ನಿಪಿ**-28(**ಬಿ**)** ಎಂದು ಗುರ್ತಿಸಲಾಯಿತು.

ಸಾಕ್ಷಿ ಪ್ರ ವ ವರದಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-29 ಎಂದು ಸಾಕ್ಷಿ ಸಹಿಯನ್ನು ನಿಪಿ-29(ಎ) ಎಂದು ಗುರ್ತಿಸಲಾಯಿತು.

ದಿನಾಂಕ: 30.12.2023 ರಂದು ಪಂಚರಾದ ಚಾಸಾ 2&3 ರವರಿಗೆ ನಿಪಿ 2 ರಂತೆ ನೋಟಿಸ್ ನೀಡಿ ಚಾಸಾ 11 ತೋರಿಸಿದ ಕೃತ್ಯ ಸ್ಥಳದ ಪಂಚನಾಮೆಯನ್ನು ನಿಪಿ1 ರಂತೆ ಮಾಡಿ, ನಿಪಿ 3 ರಂತೆ ನಕಾಶೆ, ನಿಪಿ 4 & 5 ರಂತೆ ಪೋಟೋ ತೆಗೆಸಿರುತ್ತೇನೆ. ಸಾಕ್ಷಿ ನಿಪಿ 1 ರಿಂದ 3 ರಲ್ಲಿಯ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1(ಇ), ನಿಪಿ 2(ಸಿ)ಮತ್ತು ನಿಪಿ 3(ಡಿ) ಎಂದು ಗುರ್ತಿಸಲಾಯಿತು.

ಅದೇ ದಿನ ಚಾಸಾ 08, 11 ರಿಂದ 14 ಮತ್ತು 17 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ 12 ರವರು ನನ್ನ ಮುಂದೆ ನಿಪಿ 15 ರಂತೆ ಹೇಳಿಕೆ ನೀಡಿರುತ್ತಾರೆ. ದಿನಾಂಕಃ 30.12.2023 ರಂದು ಆರೋಪಿಯನ್ನು ಅಸುಂಡಿ ಗ್ರಾಮದಲ್ಲಿ ವಶಕ್ಕೆ ಪಡೆದು ದಸ್ತಗಿರಿ ನಿಯಮ ಪಾಲಿಸಿ ವೈದ್ಯಕೀಯ ಪರೀಕ್ಷೆ ನಂತರ ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದು ಇರುತ್ತದೆ.

ದಿನಾಂಕ: 31.12.2023 ರಂದು ದೂರುದಾರಳ ಲಕ್ಷ್ಮಿ ಹೇಳಿಕೆ ದಾಖಲಿಸಲು ಚಾಸಾ 20 ರವರಿಗೆ ನಿಪಿ-19 ರಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ನಿಪಿ19 ನೋಡಿ ಗುರ್ತಿಸಿದ್ದು ಅದರಲ್ಲಿನ ಸಾಕ್ಷಿ ಸಹಿಯನ್ನು ನಿಪಿ-19 (ಬಿ) ಎಂದು ಗುರ್ತಿಸಲಾಯಿತು. ಚಾಸಾ 20 ರವರು ವಿಮ್ಸ್ ಆಸ್ಪತ್ರೆಗೆ ಬಂದು ದೂರುದಾರರು ಹೇಳಿದಂತೆ ಹೇಳಿಕೆ ಮಾಡಿಕೊಂಡು ಅದರ ಪ್ರತಿ ನೀಡಿದ್ದು ಇರುತ್ತದೆ. ಸಾಕ್ಷಿಯು ನಿಪಿ 21 ದಾಖಲೆ ನೋಡಿ ಗುರ್ತಿಸಿರುತ್ತಾರೆ.

ದಿನಾಂಕ: 10.01.2024 ರಂದು ಸದರಿ ದೂರುದಾರೆ ಲಕ್ಷ್ಮಿ ರವರು ಮೃತ ಪಟ್ಟ ಬಗ್ಗೆ ಎಂಎಲ್ ಸಿ ಸ್ವೀಕೃತವಾಗಿದ್ದು ಅದರನ್ವಯ ಕಲಂ: 302 ಐಪಿಸಿ ಅನ್ನು ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ಮನವಿ ಪತ್ರವನ್ನು ಮಾನ್ಯ 04 ನೇ ಎಸಿಜೆ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ತಾನು ಸ್ವೀಕರಿಸಿದ ಎಂ ಎಲ್ ಸಿ ಹಾಗೂ ಮನವಿ ಪತ್ರಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ -30 ಮತ್ತು ನಿಪಿ-31 ಎಂದು ಗುರ್ತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-31 ರಲ್ಲಿ ನಿಪಿ-31(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣ ಘೋರ ಪ್ರಕರಣವಾಗಿದ್ದರಿಂದ ತನಿಖೆಯನ್ನು ಚಾಸಾ 26 ರವರಿಗೆ ವಹಿಸಿ ಕೊಟ್ಟಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ. ಸಮಯ ಕೊಡಲು ನಿರಾಕರಿಸಲಾಯಿತು. ಆರೋಪಿ ಪರ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**